**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ವಿಜಯಪುರ ಇವರ ನ್ಯಾಯಾಲಯ**

<u>ಎಸ್.ಸಿ.ನಂ.74/2020</u>

<u>ಪಿಡಬ್ಲ್ಯೂ-01 (ಸಿಡಬ್ಲ್ಯೂ-01)</u>

ಸಾಕ್ಷಿದಾರರ ಹೆಸರು : ಪಂಕಜ ಚವ್ಹಾಣ

ತಂದೆ/ಗಂಡನ ಹೆಸರು: ಚಂದ್ರಶೇಖರ

ವಯಸ್ಸು : 21 ವರ್ಷ

ಉದ್ಯೋಗ : ವಿದ್ಯಾರ್ಥಿ

ವಾಸಸ್ಥಳ : ಹಂಚನಾಳ ಎಲ್.ಟಿ.ನಂ.1

<u>**ಸಾಕ್ಷಿಗೆ ಇಂದು ದಿನಾಂಕ :- 04-09-2023 ರಂದು ಪ್ರಮಾಣೀಕರಿಸಲಾಯಿತು.**</u>

<u>**ಮುಖ್ಯ ವಿಚಾರಣೆ :- ಸರಕಾರಿ ಅಭಿಯೋಜಕರವರಿಂದ.**</u>

1. ಮೃತ ಚಂದ್ರಶೇಖರ ನನ್ನ ತಂದೆಯಾಗಬೇಕು. ಚಾ.ಸಾ.12 ಬೇಬಿ ಚವ್ಹಾಣ ನನ್ನ ತಾಯಿ. ಚಾ.ಸಾ.13 ಅಭಿಷೇಕ ನನ್ನ ತಮ್ಮ. ಚಾ.ಸಾ.14 ರಿಂದ 18 ರವರು ನನಗೆ ಗೊತ್ತು. ಚಾ.ಸಾ.19 ರಿಂದ 32 ರವರು ನಮಗೆ ಸಂಬಂಧಿಕರಾಗಬೇಕು. ನನಗೆ ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿ ನಂ.2 ರಿಂದ 6 ರವರು ನನಗೆ ಗೊತ್ತು. ನನಗೆ ಸಂಘರ್ಷಕ್ಕೊಳಗಾದ ಬಾಲಕ ಆಕಾಶ @ ಸಾಗರ ಚವ್ಹಾಣ ಗೊತ್ತು. ಸನ್ 2016 ರಲ್ಲಿ ನಾವು ಹಂಚನಾಳ ತಾಂಡಾದಲ್ಲಿ ವಾಸಿಸುತ್ತಿದ್ದೆವು. ಆರೋಪಿತರೂ ಸಹ ಹಂಚನಾಳ ತಾಂಡಾದಲ್ಲಿ ನಮ್ಮ ಮನೆ ಎದುರು ವಾಸಿಸುತ್ತಿದ್ದರು.

2. ಸನ್ 2016 ಕ್ಕಿಂತ ಎರಡು ವರ್ಷಗಳ ಹಿಂದೆ 2 ನೇ ಆರೋಪಿ ಕಿಶನ್ ಚವ್ಹಾಣ ನನ್ನ ತಂದೆಯಿಂದ ಐದು ಲಕ್ಷ ರೂಪಾಯಿಗಳನ್ನು ಸಾಲವಾಗಿ ಇಸಿದುಕೊಂಡಿದ್ದ. ನಂತರ ಆ ಹಣ ನನ್ನ ತಂದೆ ಕೊಡು ಅಂತಾ ಕೇಳಿದ್ದಕ್ಕೆ ಆರೋಪಿತರು ನನ್ನ ತಂದೆಯೊಂದಿಗೆ ಜಗಳ ಮಾಡಿ ನನ್ನ ತಂದೆಗೆ ಖಲಾಸ ಮಾಡುತ್ತೇವೆ ಎಂದಿದ್ದರು. ದಿನಾಂಕ 07.07.2016 ರಂದು ರಂಜಾನ ಹಬ್ಬ ಇದ್ದು, ಆ ದಿನ ರಜೆ ಇತ್ತು. ದಿನಾಂಕ 07.07.2016 ರಂದು ಸಂಜೆ 5 ರಿಂದ

5.30 ಘಂಟೆಗೆ ನಾನು, ನನ್ನ ತಂದೆ, ನನ್ನ ತಾಯಿ, ನನ್ನ ತಮ್ಮ ಚಾ.ಸಾ.13 ನಮ್ಮ ಮನೆಯ ಕಟ್ಟೆಯ ಮೇಲೆ ಕುಳಿತಿದ್ದೆವು. ಆಗ ಸಂಘರ್ಷಕ್ಕೊಳಗಾದ ಬಾಲಕ ಆಕಾಶ @ ಸಾಗರ ಚವ್ಹಾಣ ನಮ್ಮ ಮನೆಯ ಹತ್ತಿರ ಬಂದು ನನ್ನ ತಂದೆಗೆ ರೊಕ್ಕ ಕೊಡುತ್ತೇನೆ ಬಾ ಎಂದನು. ಆಗ ನನ್ನ ತಂದೆ ಸಂಘರ್ಷಕ್ಕೊಳಗಾದ ಬಾಲಕ ಆಕಾಶನ ಹಿಂದೆ ಹಣ ಕೊಡುತ್ತಾರೆ ಅಂತಾ ಹೇಳಿದ್ದಕ್ಕೆ ಹೊರಟರು. ಆಗ ನನ್ನ ತಂದೆಯ ಹಿಂದಿನಿಂದ ನಾನು, ನನ್ನ ತಾಯಿ, ನನ್ನ ತಮ್ಮ ಚಾ.ಸಾ.13 ರವರೂ ಸಹ ಹೋದೆವು. ಆಗ ಸಂಘರ್ಷಕ್ಕೊಳಗಾದ ಬಾಲಕ ಆಕಾಶನ ಮನೆಯಲ್ಲಿ ಆಕಾಶ, 3 ನೇ ಆರೋಪಿ ಪ್ರಕಾಶ, 4 ನೇ ಆರೋಪಿ ಮಿಥುನ, 5 ನೇ ಆರೋಪಿ ಪ್ರಕಾಶ, 6 ನೇ ಆರೋಪಿ ಬೇಬಿ ಹಾಗೂ 2 ನೇ ಆರೋಪಿ ಇದ್ದರು. ನನ್ನ ತಂದೆ ಆಕಾಶ ಚವ್ಹಾಣನ ಮನೆಯ ಗೇಟ್ ಒಳಗಡೆ ಹೋದಾಗ ನಾವೂ ಸಹ ಅವರ ಹಿಂದಿನಿಂದ ಹೋದೆವು. ಆಗ 6 ನೇ ಆರೋಪಿ ಬೇಬಿ ಅವರ ಬಾಗಿಲ ಹತ್ತಿರ ನಿಂತಿದ್ದು, ಅವಳು ಖಾರದ ಪುಡಿಯನ್ನು ನನ್ನ ತಂದೆಯ ಕಣ್ಣಲ್ಲಿ ಎರಚಿದಳು. ಆಗ ನನ್ನ ತಂದೆ ಕಣ್ಣು ತಿಕ್ಕಿಕೊಳ್ಳುತ್ತಿದ್ದರು. ಆಗ 2 ನೇ ಆರೋಪಿ ಕಿಶನ್, 3 ನೇ ಆರೋಪಿ ಪ್ರಕಾಶ ಮತ್ತು 4 ನೇ ಆರೋಪಿ ಮಿಥುನ ನನ್ನ ತಂದೆಗೆ ಗಟ್ಟಿಯಾಗಿ ಹಿಡಿದರು. ಆಗ 1 ನೇ ಆರೋಪಿ ಹತ್ಯಾರದಿಂದ ನನ್ನ ತಂದೆಗೆ ಕುತ್ತಿಗೆಗೆ, ತಲೆಗೆ, ಕೈಗೆ ಹೊಡೆದ. ಆಗ ನನ್ನ ತಂದೆ ಚೀರಾಡುತ್ತಿದ್ದರು. ಆಗ ಬೇರೆ ಜನರೂ ಸಹ ಮನೆಯಿಂದ ಹೊರಗಡೆ ಬಂದಿದ್ದರು. ಆಗ 5 ನೇ ಆರೋಪಿ ಪ್ರಕಾಶನ ಕೈಯಲ್ಲಿ ಜಂಬ್ಯಾ ಇತ್ತು. ಆತ ನನ್ನ ತಂದೆಗೆ ಕೈಗೆ, ಹೊಟ್ಟೆಗೆ, ಎದೆಗೆ ಚುಚ್ಚಿದ. ಆಗ ನನ್ನ ತಂದೆಯ ಮೈಯಿಂದ ರಕ್ತ ಸುರಿಯಲು ಪ್ರಾರಂಭವಾಯಿತು. ಆಗ ನಾವು ಆರೋಪಿತರಿಗೆ ಹೀಗೆ

ಮಾಡಬೇಡಿ, ನನ್ನ ತಂದೆಗೆ ಬಿಡು ಎಂದಾಗ ಅವರು ನಮಗೂ ಸಹ ಸಮೀಪ ಬಂದರೆ ಖಲಾಸ ಮಾಡುತ್ತೇವೆ ಎಂದು ತಲ್ವಾರ ತೋರಿಸಿ ಅಂದರು. ನನ್ನ ತಂದೆಗೆ ಗಾಯವಾಗಿ ತೀವ್ರ ರಕ್ತಗಾಯವಾಯಿತು. ನನ್ನ ತಂದೆ ಕೆಳಗೆ ಬಿದ್ದರು. ಆಗ ಆರೋಪಿತರು ಅಲ್ಲಿಂದ ಹೋದರು. ನಂತರ ನಾವು ನನ್ನ ತಂದೆಯ ಹತ್ತಿರ ಬಂದು ನೋಡಲಾಗಿ ನನ್ನ ತಂದೆಗೆ ತೀವ್ರ ರಕ್ತಗಾಯವಾಗಿತ್ತು. ನಾವು ನನ್ನ ತಂದೆಗೆ ಅಂಗಳದಲ್ಲಿ ತಂದೆವು. ನನ್ನ ತಂದೆ ಕೈಕಾಲು ತಂಪಾಗಿದ್ದವು. ಘಟನೆ ನಡೆದಾಗ ಸಮಯ ಸಂಜೆ 6.00 ರಿಂದ 6.30 ಘಂಟೆಯಾಗಿತ್ತು. ನಂತರ ನಾವು ನಮ್ಮ ತಂದೆಯನ್ನು ಅಲ್-ಅಮೀನ ಆಸ್ಪತ್ರೆ, ವಿಜಯಪುರಕ್ಕೆ ಕರೆದುಕೊಂಡು ಬಂದೆವು. ಅಲ್ಲಿ ವೈದ್ಯರು ನನ್ನ ತಂದೆಯನ್ನು ಪರೀಕ್ಷಿಸಿ ಅವರು ತೀರಿಕೊಂಡಿದ್ದಾರೆ ಎಂದು ಹೇಳಿದರು. ನಂತರ ನಾನು ರಾತ್ರಿ 8.00 ಘಂಟೆಗೆ ವಿಜಯಪುರ ರೂರಲ್ ಠಾಣೆಯಲ್ಲಿ ದೂರು ಕೊಟ್ಟೆ ಆ ದೂರು ನಿ.ಪಿ.1 ಎಂದು, ಸಾಕ್ಷಿಯ ರುಜು ನಿ.ಪಿ.1(ಎ) ಎಂದು ಗುರುತಿಸಲಾಯಿತು. ನಂತರ ನಾನು ಅಲ್-ಅಮೀನ ಆಸ್ಪತ್ರೆಗೆ ವಾಪಸ್ ಬಂದೆ.

3.ಮಾರನೇ ದಿನ ಬೆಳಿಗ್ಗೆ 7.00 ಘಂಟೆಗೆ ವಿಜಯಪುರ ರೂರಲ್ ಪೋಲೀಸರು ಅಲ್-ಅಮೀನ ಆಸ್ಪತ್ರೆಗೆ ಬಂದಿದ್ದರು. ಅಲ್ಲಿ ಪೋಲೀಸರು ನನ್ನ ತಂದೆಯ ಮೃತ ದೇಹ ನೋಡಿ ಪೋಟೋ ತೆಗೆದರು. ನಂತರ ನಮ್ಮ ತಾಂಡಾಕ್ಕೆ ಬೆಳಿಗ್ಗೆ 9.00 ರಿಂದ 9.30 ಘಂಟೆಗೆ ಬಂದೆವು. ಪೋಲೀಸರು ನಮ್ಮ ತಾಂಡಾಕ್ಕೆ ಬಂದಿದ್ದರು. ಪೋಲೀಸರು 2 ನೇ ಆರೋಪಿ ಕಿಶನ್ ಮನೆಗೆ ಬಂದರು. ಅಲ್ಲಿ ಪೋಲೀಸರು ಪಂಚನಾಮೆ ಮಾಡಿದರು. ಪಂಚನಾಮೆ ಕಾಲಕ್ಕೆ ಚಾ.ಸಾ.4 ಮತ್ತು ಚಾ.ಸಾ.5 ಇದ್ದರು. ಪೋಲೀಸರಿಗೆ ನಾನೇ ಸ್ಥಳ

ತೋರಿಸಿದೆ. ಪೋಲೀಸರು ಗೋಡೆಯ ಮೇಲೆ ಚೆಲ್ಲಿದ್ದ ರಕ್ತ ಕೆದರಿ ತೆಗೆದುಕೊಂಡರು. ಪೋಲೀಸರು ಗೋಡೆಯ ಮೇಲೆ ರಕ್ತ ಹತ್ತಲಾರದ ಸ್ಥಳದಲ್ಲಿ ಸಹ ಕೆದರಿ ಅದನ್ನು ತೆಗೆದುಕೊಂಡರು. ಆ ರೂಮಿನಲ್ಲಿದ್ದ ಖಾರದ ಪುಡಿ ಸಹ ಪೋಲೀಸರು ತೆಗೆದುಕೊಂಡರು. ಆ ರೂಮಿನಲ್ಲಿದ್ದ ಒಂದು ಜಂಬ್ಯಾ ತೆಗೆದುಕೊಂಡರು. ಪೋಲೀಸರು ಆ ಸ್ಥಳದಲ್ಲಿದ್ದ ನನ್ನ ತಂದೆಯ ರಿಬಾಕ್ ಕಂಪನಿಯ ಶೂ ತೆಗೆದುಕೊಂಡರು. (ಈ ಹಂತದಲ್ಲಿ ತೆರೆದ ನ್ಯಾಯಾಲಯದಲ್ಲಿ ಮೂರು ಸೀಲ್ ಆದ ವಸ್ತುಗಳನ್ನು ತೆರೆಯಲು ಮಾನ್ಯ ಪಿ.ಪಿ.ಯವರು ಅನುಮತಿ ಕೋರಿದ್ದು, ಆ ವಸ್ತುಗಳ ಮೇಲಿದ್ದ ಸೀಲಗಳು ಸುಸ್ಥಿತಿಯಲ್ಲಿದ್ದು, ಅವುಗಳನ್ನು ತೆರೆಯಲು ಅನುಮತಿ ನೀಡಲಾಯಿತು). ನಾನು ಗೋಡೆಯಿಂದ ಕೆತ್ತಿ ತೆಗೆದ ರಕ್ತ ಹತ್ತಿದ ಮಣ್ಣು ನೋಡುತ್ತಿದ್ದೇನೆ. ಅದು ಎಂ.ಓ.1 ಎಂದು ಗುರುತಿಸಲಾಯಿತು. ನಾನು ಗೋಡೆಯಿಂದ ಕೆತ್ತಿ ತೆಗೆದ ರಕ್ತ ಹತ್ತಲಾರದ ಮಣ್ಣು ನೋಡುತ್ತಿದ್ದು, ಅದು ಎಂ.ಓ.2 ಎಂದು ಗುರುತಿಸಲಾಯಿತು. ನನ್ನ ತಂದೆಗೆ ಹೊಡೆಯಲು ಬಳಸಿದ ಜಂಬ್ಯಾ ನೋಡುತ್ತಿದ್ದು, ಅದು ಎಂ.ಓ.3 ಎಂದು ಗುರುತಿಸಲಾಯಿತು. ಪೋಲೀಸರು ಸ್ಥಳದಿಂದ ಅಮಾನತುಪಡಿಸಿಕೊಂಡ ಖಾರದ ಪುಡಿ ನೋಡುತ್ತಿದ್ದು, ಅದು ಎಂ.ಓ.4 ಎಂದು ಗುರುತಿಸಲಾಯಿತು. ಪೋಲೀಸರು ಸ್ಥಳದಿಂದ ಅಮಾನತುಪಡಿಸಿಕೊಂಡ ನನ್ನ ತಂದೆಯ ರಿಬಾಕ್ ಕಂಪನಿಯ ಒಂದು ಜೊತೆ ಶೂಗಳನ್ನು ನೋಡುತ್ತಿದ್ದು, ಅದನ್ನು ಎಂ.ಓ.5 ಎಂದು ಗುರುತಿಸಲಾಯಿತು.

4. ಆ ದಿನ ನನ್ನ ತಂದೆ ಬಿಳಿ ಟೀ ಶರ್ಟ, ಟ್ರ್ಯಾಕ್ ಪ್ಯಾಂಟ, ಹಾಫ್ ಬನಿಯನ್ ಹಾಗೂ ಅಂಡರವೇರ ತೊಟ್ಟಿದ್ದರು. ನನ್ನ ತಂದೆಯ ಕೈಯಲ್ಲಿ ಕೆಂಪು ದಾರ, ಕೊರಳಲ್ಲಿ

ಕರಿದಾರದಿಂದ ಪೋಣಿಸಿದ ತಾಯ್ತು ಇತ್ತು. ಆ ದಿನ ನನ್ನ ತಂದೆಯ ಸೊಂಟದಲ್ಲಿ ಒಂದು ಕರಿ ಬಣ್ಣದ ಉಡದಾರ ಹಾಗೂ ಒಂದು ಬೆಳ್ಳಿ ನಮೂನೆಯ ಉಡದಾರ ಇತ್ತು. ಆ ದಿನ ನನ್ನ ತಂದೆಗೆ ಹೊಡೆಯಲು ಬಳಸಿದ ಹತ್ಯಾರ ನೋಡಿದರೆ ಗುರುತಿಸುತ್ತೇನೆ. (ಈ ಹಂತದಲ್ಲಿ ತೆರೆದ ನ್ಯಾಯಾಲಯದಲ್ಲಿ ಐದು ಸೀಲ್ ಆದ ವಸ್ತುಗಳನ್ನು ತೆರೆಯಲು ಮಾನ್ಯ ಪಿ.ಪಿ.ಯವರು ಅನುಮತಿ ಕೋರಿದ್ದು, ಆ ವಸ್ತುಗಳ ಮೇಲಿದ್ದ ಸೀಲಗಳು ಸುಸ್ಥಿತಿಯಲ್ಲಿದ್ದು, ಅವುಗಳನ್ನು ತೆರೆಯಲು ಅನುಮತಿ ನೀಡಲಾಯಿತು). ನಾನು ನನ್ನ ತಂದೆ ತೊಟ್ಟುಕೊಂಡಿದ್ದ ಟೀ ಶರ್ಟ ನೋಡುತ್ತಿದ್ದು, ಅದಕ್ಕೆ ರಕ್ತ ಹತ್ತಿದ್ದು, ಅದನ್ನು ಎಂ.ಓ.6 ಎಂದು ಗುರುತಿಸಲಾಯಿತು. ನನ್ನ ತಂದೆಯ ಬನಿಯನ್ ನೋಡುತ್ತಿದ್ದು, ಅದಕ್ಕೆ ರಕ್ತ ಹತ್ತಿದ್ದು, ಅದನ್ನು ಎಂ.ಓ.7 ಎಂದು ಗುರುತಿಸಲಾಯಿತು. ನನ್ನ ತಂದೆಯ ಕಪ್ಪು ಬಣ್ಣದ ನೈಟ್ ಪ್ಯಾಂಟ ನೋಡುತ್ತಿದ್ದು, ಅದಕ್ಕೂ ಸಹ ರಕ್ತ ಹತ್ತಿದ್ದು, ಅದನ್ನು ಎಂ.ಓ.8 ಎಂದು ಗುರುತಿಸಲಾಯಿತು. ನನ್ನ ತಂದೆಯ ಅಂಡರವೇಯರ ನೋಡುತ್ತಿದ್ದು, ಅದು ಎಂ.ಓ.9 ಎಂದು ಗುರುತಿಸಲಾಯಿತು. ನನ್ನ ತಂದೆಗೆ ಹೊಡೆಯಲು ಬಳಸಿದ ಹತ್ಯಾರ ನೋಡುತ್ತಿದ್ದು, ಅದು ಎಂ.ಓ.10 ಎಂದು ಗುರುತಿಸಲಾಯಿತು. ಎಂ.ಓ.10 ಕ್ಕೆ ರಕ್ತ ಹತ್ತಿದೆ. ನನ್ನ ತಂದೆಗೆ ಸೇರಿದ ಕರಿದಾರದ ಉಡದಾರ ನೋಡುತ್ತಿದ್ದು, ಅದು ಎಂ.ಓ.11 ಎಂದು ಗುರುತಿಸಲಾಯಿತು. ನನ್ನ ತಂದೆಯ ಕೊರಳಲ್ಲಿದ್ದ ಕರಿದಾರ ಸಣ್ಣ ತಾಯ್ತುದೊಂದಿಗೆ ಇದ್ದದ್ದು ನೋಡುತ್ತಿದ್ದು, ಅದು ಎಂ.ಓ.12 ಎಂದು ಗುರುತಿಸಲಾಯಿತು. ನನ್ನ ತಂದೆಯ ಕೈಗೆ ಕಟ್ಟಿಕೊಂಡಿದ್ದ ಕೆಂಪು ದಾರ ನೋಡುತ್ತಿದ್ದು, ಅದು ಎಂ.ಓ.13 ಎಂದು

ಗುರುತಿಸಲಾಯಿತು. ನನ್ನ ತಂದೆಯ ಸೊಂಟದಲ್ಲಿದ್ದ ಬೆಳ್ಳಿ ನಮೂನೆಯ ಉಡದಾರ ನೋಡುತ್ತಿದ್ದು, ಅದು ಎಂ.ಓ.14 ಎಂದು ಗುರುತಿಸಲಾಯಿತು. ನಾನು ಶವ ಮಹಜರ ಕಾಲಕ್ಕೆ ತೆಗೆದ ಒಂದು ಪೋಟೋ ಹಾಗೂ ಸ್ಥಳ ಮಹಜರ ಕಾಲಕ್ಕೆ ತೆಗೆದ ಒಂದು ಪೋಟೋ ನೋಡುತ್ತಿದ್ದೇನೆ. (ಆ ಪೋಟೋಗಳನ್ನು ಗುರುತಿಸಲು ಮಾನ್ಯ ಪಿ.ಪಿ.ಯವರು ಕೇಳಿಕೊಂಡಿದ್ದು, ತನಿಖಾಧಿಕಾರಿಗಳು ಆ ಪೋಟೋದ ಬಗ್ಗೆ ಸಿ.ಡಿ. ಅಥವಾ ನೆಗೆಟಿವ್ ಆಗಲಿ ಹಾಜರುಪಡಿಸಿಲ್ಲ. ಕಾರಣ ಅವುಗಳನ್ನು ಗುರುತಿಸಲು ಮಾನ್ಯ ಪಿ.ಪಿ.ಯವರ ವಿನಂತಿಯನ್ನು ತಿರಸ್ಕರಿಸಲಾಯಿತು). ಆ ದಿನ ನನ್ನ ತಂದೆಗೆ ಕೊಲೆ ಮಾಡಿದ ಆರೋಪಿ ನಂ.2 ರಿಂದ 6 ಈ ದಿನ ನ್ಯಾಯಾಲಯದಲ್ಲಿ ಹಾಜರಿದ್ದು, ಅವರನ್ನು ನೋಡಿ ಗುರುತಿಸಿದ್ದೇನೆ. ಸಂಘರ್ಷಕ್ಕೊಳಗಾದ ಬಾಲಕ ಆಕಾಶನನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟೀ ಸವಾಲು:- ಶ್ರೀ ಎಸ್.ಆರ್.ಕೆ., ವಕೀಲರಿಂದ ಆರೋಪಿತರ ಪರಃ**

ಶ್ರೀ ಎಸ್.ಆರ್.ಕೆ., ವಕೀಲರು ದಂಡ ಪ್ರಕ್ರಿಯಾ ಸಂಹಿತೆ ಕಲಂ 231(2)ರಲ್ಲಿ ಅರ್ಜಿ ಸಲ್ಲಿಸಿ ಈ ಸಾಕ್ಷಿ ಹಾಗೂ ಚಾ.ಸಾ.12 ರಿಂದ 17ರವರ ಪಾಟಿ ಸವಾಲನ್ನು ಏಕಕಾಲದಲ್ಲಿ ಮಾಡುವುದಾಗಿ ಹೇಳಿ ಪಾಟಿ ಸವಾಲು ಮಾಡಲು ಕಾಲಾವಕಾಶ ಕೋರಿದ್ದರಿಂದ ಅವರ ಕೋರಿಕೆಯ ಮೇಲೆ ಪಾಟಿ ಸವಾಲನ್ನು ಮುಂದೂಡಲಾಯಿತು.

*(ನನ್ನ ಉಕ್ತ ಲೇಖನದ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).*

ಓ.ಹೇ.ಕೇ. ಸರಿ ಅದೆ,

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪುರ.